# ವರ್ತಮಾನದಲ್ಲಿ ಭಕ್ತಿಮಾರ್ಗಗಳ ಪ್ರಸ್ತುತತೆ

(ಕನ್ನಡ ಸಾಹಿತ್ಯವನ್ನು ಅನುಲಕ್ಷಿಸಿ)




ಪ್ರಧಾನ ಸಂಪಾದಕರು

ಡಾ. ಎಸ್. ಟಿ. ಮೇರವಾಡೆ

ಸಂಪಾದಕರು

ಪ್ರೊ. ಬಿ. ಬಿ. ಡೆಂಗನವರ    ಡಾ. ಆರ್. ವಿ. ಪಾಟೀಲ



ಸೌಮ್ಯ ಪ್ರಕಾಶನ, ವಿಜಯಪುರ

**RELEVANCE OF DEVOTIONAL ROUTS IN CURRENT SCENARIO:**
**(With Special Reference to Kannada Literature)**


Edited by : Dr. R. V. Patil, J.S.S. Degree College, Vidyagiri-Dharwad
Prof. B. B. Denganavar, S. B. Arts and K.C.P. Science College
Vijayapur.


| | | |
|---|---|---|
| ISBN | : | 978-93-83813-52-0 |
| Publisher | : | Soumya Prakashan<br>Mahabaleswar Colony, Darga Road<br>Vijayapur |
| First Edition | : | February - 2020 |
| © | : | Publisher |
| Copies | : | 1000 |
| Pages | : | xxiv + 476 = 500 |
| Price | : | Rs. 400/- |
| Book Size | : | Demy 1/8 |
| Paper Used | : | 70 GSM N.S. Maplitho |

**ವರ್ತಮಾನದಲ್ಲಿ ಭಕ್ತಿಮಾರ್ಗಗಳ ಪ್ರಸ್ತುತತೆ** (ಕನ್ನಡ ಸಾಹಿತ್ಯವನ್ನು ಅನುಲಕ್ಷಿಸಿ)

| | | |
|---|---|---|
| ಸಂಪಾದಕರು | : | ಡಾ. ಆರ್. ವಿ. ಪಾಟೀಲ ಪ್ರೊ. ಬಿ. ಬಿ. ಡೆಂಗನವರ, |
| ಪ್ರಥಮ ಮುದ್ರಣ | : | ಫೆಬ್ರುವರಿ – ೨೦೨೦ |
| ಪ್ರತಿಗಳು | : | ೧೦೦೦ |
| ಪ್ರಕಾಶಕರು | : | ಸೌಮ್ಯ ಪ್ರಕಾಶನ<br>ವಿಜಯಪುರ |
| ಪುಟಗಳು | : | xxiv + ೪೭೬ = ೫೦೦ |
| ಬೆಲೆ | : | ರೂ. ೪೦೦/– |
| ಪುಸ್ತಕದ ಆಕಾರ | : | ಡೆಮಿ ೧/೮ |
| ಬಳಸಿದ ಕಾಗದ | : | ೭೦ ಜಿಎಸ್ಎಮ್ ಎನ್.ಎಸ್. |

ಮುದ್ರಕರು :

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ವಿಠ್ಠಲ ಮಂದಿರ ರೋಡ, ಗದಗ – 582 101
Email : chaitanyaoffset@gmail.com
Mobile : 8884495331, 9448223602

೯೭. ದಾಸಶ್ರೇಷ್ಠ ಕನಕದಾಸರ ಜೀವನ ವೃತ್ತಾಂತದ ಪಕ್ಷಿ ನೋಟ ೪೨೫

● ಡಾ. ಎಸ್.ಬಿ. ರಾಠೋಡ

೯೮. ಬಸವಣ್ಣನ ವಚನ ಮತ್ತು ಹರಿಹರನ ರಗಳೆಗಳಲ್ಲಿ ಭಕ್ತಿ ನಿಲುವು ೪೨೯

● ಡಾ. ಶುಲಾಬಾಯಿ ಎಚ್. ಕೆ.

೯೯. ವೀರಶೈವ ಧರ್ಮ ಮತ್ತು ಬಸವಣ್ಣನವರು ೪೩೩

● ಸುವರ್ಣಾ ಪಾಟೀಲ

೧೦೦. ವರ್ತಮಾನದಲ್ಲಿ ನಿಜಗುಣ ಶಿವಯೋಗಿ ಭಕ್ತಿ ಮಾರ್ಗಗಳ ಪ್ರಸ್ತುತತೆ ೪೩೭

● ಡಾ. ಅಶೋಕ ಮುಧೋಳ

೧೦೧. ವೀರಶೈವ ಸಾಹಿತ್ಯದಲ್ಲಿ ಭಕ್ತಿಯ ಪ್ರಸ್ತುತತೆ ೪೪೧

● ಡಾ. ವಿಜಯಶ್ರೀ ಹಿರೇಮಠ

೧೦೨. ಜೈನಧರ್ಮದಲ್ಲಿ ಭಕ್ತಿ ಮಾರ್ಗದ ಪ್ರಸ್ತುತತೆ ೪೫೦

● ಡಾ. ಜಿನದತ್ತ ಹಡಗಲಿ

೧೦೩. ಜೈನ ಸಮವಸರಣ ಮಂಟಪ ಒಂದು ಅವಲೋಕನ ೪೫೪

● ಡಾ. ಸವಿತಾ ಎಂ. ಝುಳಕಿ

೧೦೪. ಕೋಟಿಗೊಬ್ಬ ಶರಣರು ಮಂಟೇಸ್ವಾಮಿ, ಸಿದ್ದಪ್ಪಾಜಿ ೪೫೬

● ಡಾ. ಶಂಕರೇಗೌಡ ಎನ್.ಎಸ್.

೧೦೫. ಎಪ್ಪತ್ತೇಳು ಮಲೆಗಳಲ್ಲಿ ನಲಿದು ನಾಟ್ಯವಾಡುವ ಮುದ್ದು ಮಾದೇಶ್ವರರ ಮಾಯಾರೂಪ ೪೬೨

● ವಿನೋದ್‌ಕುಮಾರ್ ಸಿ.ಎನ್.

೧೦೬. ಪುರಂದರದಾಸರ ಮತ್ತು ಕನಕದಾಸರ ಕೀರ್ತನೆಯಲ್ಲಿ ಭಕ್ತಿ ೪೬೫

● ಪ್ರೊ. ಸುಶ್ಮಿತಾ ಪ. ಹಮ್ಮಿಗಿ

೧೦೭. ಪ್ರಸ್ತುತ ಕಾಲಘಟ್ಟದಲ್ಲಿ ವಚನ ಮೀಮಾಂಸೆಯ ಪ್ರಭಾವ ೪೬೯

● ಡಾ. ಪ್ರೇಮ ಸಿದ್ದರಾಜು

೧೦೮. ಡಾ. ಬಿ. ವ್ಹಿ. ಶಿರೂರ ಅವರ ಪ್ರಾಚೀನ ಜೈನ ಗ್ರಂಥಗಳ ಸಂಪಾದನೆಯ ವೈಶಿಷ್ಟ್ಯ ೪೭೩

● ಡಾ. ವ್ಹಿ. ಬಿ. ಸಣ್ಣಸಕ್ಕರಗೌಡರ

# ದಾಸಶ್ರೇಷ್ಠ ಕನಕದಾಸರ ಜೀವನ ವೃತ್ತಾಂತದ ಪಕ್ಷಿ ನೋಟ

• ಡಾ. ಎಸ್.ಬಿ. ರಾಠೋಡ

ಪೀಠಿಕೆ : ವಚನ ಸಾಹಿತ್ಯದ ಅಂಟಿನ–ನಂಟಿನೊಂದಿಗೆ ಬೆಳೆದು ಬಂದ ಸಾಹಿತ್ಯ ಪರಂಪರೆ ಅಂದರೆ ದಾಸ ಸಾಹಿತ್ಯ. ಕ್ರಿ ಶ ೧೨೭೫ ರ ನರಹರಿ ತೀರ್ಥರಿಂದ ಹಿಡಿದು, ಶ್ರೀಪಾದರಾಯ, ವ್ಯಾಸರಾಯ, ವಾದಿರಾಜ, ಪುರಂದರದಾಸ, ಕನಕದಾಸ, ಮಹಿಪತಿದಾಸ, ವಿಜಯದಾಸ, ಪ್ರಸನ್ನವೆಂಕಟದಾಸ, ಗೋಪಾಲದಾಸ, ಜಗನ್ನಾಥದಾಸ, ಹೀಗೆ ೧೮೦೯ ರ ವರೆಗೆ ದಾಸ ಸಾಹಿತ್ಯ ಪರಂಪರೆ ಬೆಳೆದು ಬಂದದ್ದು, ಕನ್ನಡ ಸಾಹಿತ್ಯ ಚರಿತ್ರೆಗೆ ಹಿಡಿದ ಕೈಗನ್ನಡಿಯಾಗಿದೆ. ವ್ಯಾಸರಾಯನ ಶಿಷ್ಯರಾಗಿ ದಾಸ ಪದವಿಯನ್ನು ಪಡೆದುಕೊಂಡು, ದಾಸಕೂಟದ ಇತಿಹಾಸವನ್ನು ಜನಪ್ರೀಯಗೋಳಿಸಿದವರೆಂದರೆ ಕನಕದಾಸರು ಮತ್ತು ಪುರಂದರದಾಸರು. ದಾಸವರೇಣ್ಯರು ಗತಿಸಿ ಇಂದಿಗೆ ಸುಮಾರು ಐದುನೂರವರ್ಷಕ್ಕಿಂತಲೂ ಹೆಚ್ಚಿಗೆ ಸಂದಿದ್ದರೂ, ಕರ್ನಾಟಕ ಜನತೆಯು ಇವರನ್ನು ಮೆರೆತಿಲ್ಲ. ಪೂಜ್ಯರ ಪುಣ್ಯನಾಮಗಳು ಜನ–ಮನದಲ್ಲಿ ಇಂದಿಗೂ ಹಚ್ಚಹಸುರಾಗಿ ಉಳಿದುಕೊಂಡಿವೆ.

ದಾಸಶ್ರೇಷ್ಠ ಪುರಂದರದಾಸರ ಜಾಡಿನಲ್ಲಿಯೇ ದಾಸಶ್ರೇಷ್ಠನಾಗಿ ಬೆಳೆದವನೇಂದರೆ ಕನಕದಾಸರು. ಕ್ರಿ. ಶ. ಹದಿನಾರನೆಯ ಶತಮಾನದಲ್ಲಿ ಬಾಳಿದ ಇವರು ಕಾಗಿನೆಲೆಯ ಆದಿಕೇಶವ ಸ್ವಾಮಿಯನ್ನು ಆರಾಧ್ಯದೈವತವನ್ನಾಗಿ ಮಾಡಿಕೊಂಡಿದ್ದರು. ಕೀಳ ಕುಲದಲ್ಲಿ ಜನಿಸಿದರೂ, ಪೂರ್ವಜನ್ಮದ ಸಂಸ್ಕಾರದ ಫಲದಿಂದ ದಾಸವರೇಣ್ಯರಾದರು. ಕನಕದಾಸರ ಅಚಲಶ್ರದ್ಧೆಯ ಸಂಕೇತವಾಗಿ ಉಡುಪಿಯ ಶ್ರೀಕೃಷ್ಣನ ದೇವಾಲಯದ ಹಿಂಬದಿಯಲ್ಲಿ ಕನಕನ ಕಿಂಡಿ ಎಂದೇ ಪ್ರಸಿದ್ದವಾಗಿದೆ. ಬೋಧನಾಪರ ಕೀರ್ತನೆಗಳನ್ನಲ್ಲದೆ, ಕನಕ್ಕದಾಸರು 'ರಾಮಧಾನ್ಯ ಚರಿತ್ರೆ' 'ಮೋಹನತರಂಗಿಣಿ' ಎಂಬೆರಡು ಕಾವ್ಯಕೃತಿಗಳನ್ನ ರಚಿಸಿ ದಾಖಲೆ ಸ್ಥಾಪಿಸಿರುವುದು ಇಂದಿಗೂ ಪ್ರಸ್ತುತ. ಕನಕದಾಸರ 'ರಾಮಧಾನ್ಯ ಚರಿತ್ರೆ' ಕನ್ನಡ ಸಾಹಿತ್ಯಲೋಕದಲ್ಲಿ ವಿಶಿಷ್ಠ ಕೃತಿಯಾಗಿ ಪರಿಣಮಿಸಿದೆ. ಧಾನ್ಯಗಳ ಮಧ್ಯ 'ಕಾಳಗ' ಸುರುವಾದದ್ದು ಮತ್ತು ಶ್ರೇಷ್ಠತೆ ಪಡೆದುಕೊಂಡದ್ದು ಇದು ಕನಕದಾಸರ ಕೈಚಳಕವೇ